**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 2090/2015**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - ಗುಂಡೂರಾವ್ | | **ಚಾ.ಸಾ.-1** |
| **ತಂದೆ ಹೆಸರು** | - ರಾಮ್ ರಾವ್ | | **ಪ್ರಾ.ಸಾ.-2** |
| **ವಯಸ್ಸು** | - 73 ವರ್ಷ | | |
| **ಉದ್ಯೋಗ** | - ವ್ಯಾಪಾರ | | |
| **ವಾಸಸ್ಥಳಃ** | - ಮದ್ದೂರು | | |

ದಿನಾಂಕಃ 31.12.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ 299 ಭಾರತ ದಂಡ ಪ್ರಕ್ರಿಯಾ ಸಂಹಿತೆ ಕಲಂ ರಡಿಯಲ್ಲಿಃ ಮಾನ್ಯ ಮುಖ್ಯ ಅಭಿಯೋಜಕರಿಂದಃ**

ಸುಮಾರು 10 ವರ್ಷಗಳ ಹಿಂದೆ ರಾಘವೇಂದ್ರ ಕಾಫಿ ವರ್ಕ್ಸ್ ಮತ್ತು ಪ್ರಾವಿಷನ್ ಸ್ಟೋರ್ ನಲ್ಲಿ ಕಳ್ಳತನವಾಗಿರುತ್ತದೆ. ನಮ್ಮ ಅಂಗಡಿಯಲ್ಲಿ ಇಟ್ಟಿದ್ದ 1 ಲಕ್ಷ ರೂ. ಬೆಲೆಬಾಳುವ ಸಿಗರೇಟ್ ಪ್ಯಾಕೇಟ್ ಗಳನ್ನು ಕಳ್ಳತನ ಮಾಡಿರುತ್ತಾರೆ. ಒಂದು ಗೋಡಂಬಿ ಟಿನ್ ನ್ನು ಕಳ್ಳತನ ಮಾಡಿರುತ್ತಾರೆ. ನಮ್ಮ ಅಂಗಡಿಗೆ ಹಾಕಿದ್ದ ಬೀಗವನ್ನು ಮುರಿದುಹಾಕಿರುತ್ತಾರೆ. ನಮ್ಮ ಅಂಗಡಿಯಲ್ಲಿಟ್ಟಿದ್ದ 15 ಸಾವಿರ ರೂ. ಮೇಲ್ಪಟ್ಟು ಹಣವನ್ನು ಆರೋಪಿತರು ಕಳ್ಳತನ ಮಾಡಿರುತ್ತಾರೆ. ಈ ಸಂಬಂಧವಾಗಿ ನಾನು ಪೋಲೀಸರಿಗೆ ದೂರನ್ನು ನೀಡಿರುತ್ತೇನೆ. ನಂತರ ಪೋಲೀಸರು ಸ್ಥಳಕ್ಕೆ ಬಂದು, ಬೆಳಗ್ಗೆ 10.00 ರಿಂದ 11.00 ಗಂಟೆಯ ಸಮಯದಲ್ಲಿ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ಸದರೀ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಮಹಜರ್ ನ ಸಂದರ್ಭದಲ್ಲಿ ಚಾ.ಸಾ. 2 ಮತ್ತು 3 ರವರು, ಹಾಜರಿರುತ್ತಾರೆ. ಪೋಲೀಸರು ಮಹಜರ್ ನ ಸಂದರ್ಭದಲ್ಲಿ ಒಂದು ಬೀಗ ಮತ್ತು ಕಬ್ಬಿಣದ ರಾಡ್ ನ್ನು ವಶಪಡಿಸಿಕೊಂಡಿರುತ್ತಾರೆ. ಈ ಸಂಬಂಧವಾಗಿ ನಾನು ಪೋಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರೀ ದಾಖಲೆ ದೂರಾಗಿದ್ದು, ಅದನ್ನು ನಿ.ಪಿ. 6 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ. 6(ಎ) ಎಂದು, ಮಹಜರ್ ನ್ನು ನಿ.ಪಿ. 7 ಎಂದು,

ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ. 7(ಎ) ಎಂದು ಗುರುತಿಸಲಾಯಿತು. ಕಬ್ಬಿಣದ ರಾಡ್ ನ್ನು ನೋಡಿದರೆ ಗುರುತಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು. )**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದ**

ನಿಮ್ಮ ಅಂಗಡಿಯನ್ನು ಕಳ್ಳತನ ಮಾಡಿದ ವ್ಯಕ್ತಿಯ ಹೆಸರು ರಾಜ ಬಿನ್ ವೆಂಕಟೇಶ್, 28 ವರ್ಷ, ಬೋವಿ ಜನಾಂಗ, ಗಾರೆ ಕೆಲಸ, ವಾಸಃ ಉಮ್ಮಡಹಳ್ಳಿ ಗೇಟ್, ಶ್ರೀನಿವಾಸ ಪುರ, ಮಂಡ್ಯ ತಾಲ್ಲೂಕು ಎಂದು ನೀವು ಪೋಲೀಸರಿಗೆ ಮುಂದುವರೆದ ಹೇಳಿಕೆಯನ್ನು ಈಗ ಓದಿ ಹೇಳಿದಂತೆ ತಿಳಿಸಿದ್ದೀರಿ ಎಂದರೆ ಸರಿಯಲ್ಲ. ಸದರೀ ಆಯ್ದ ಭಾಗವನ್ನು ನಿ.ಪಿ. 8 ಎಂದು ಗುರುತಿಸಲಾಯಿತು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ , ಮದ್ದೂರು.